## ಹೆರಾಲ್ಡ್ ವಾಷಿಂಗ್ಟನ್ ಗ್ರಂಥಾಲಯ

# ಪುಸ್ತಕ ಸಂಸ್ಕೃತಿಯ ಜೀವಂತ ಕಲಾಕೃತಿ



**ವಿನ್ಯಾಸದಿಂದಲೂ, ಆಶಯದಿಂದಲೂ, ತನ್ನ ಕಾರ್ಯವೈಖರಿಯಿಂದಲೂ ಆಕರ್ಷಕವಾಗಿ ಕಾಣುವ ಶಿಕಾಗೋದ ಹೆರಾಲ್ಡ್ ವಾಷಿಂಗ್ಟನ್ ಗ್ರಂಥಾಲಯ, ನಾಗರಿಕರ ಬದುಕನ್ನು ಓದು, ಕಲಿಕೆಯ ಮೂಲಕ ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಪುಸ್ತಕ ಪ್ರೀತಿಯನ್ನು ಹಂಚುವ, ಜ್ಞಾನ ಪ್ರಸರಣೆಗೆ ನೆರವಾಗುವ ವಿಶಿಷ್ಟ ಪರಿಕಲ್ಪನೆ ಗ್ರಂಥಾಲಯದಲ್ಲಿ ಮೇಳೈಸಿದೆ.**

**■ ಡಾ. ಟಿ.ಎಸ್. ಚನ್ನೇಶ್**

**The very existence of libraries affords the best evidence that we may yet to have hope for the future of man.**

**—T.S. Eliot**

ಅಮೆರಿಕದ ಸಮಾಜವು ವಿಜ್ಞಾನ ಮತ್ತು ತಂತ್ರಜ್ಞಾನ ಮೊದಲಾದವುಗಳ ವಿಕಾಸದಿಂದ ಏನೆಲ್ಲಾ ಭರವಸೆಗಳನ್ನು ನಿರ್ಮಿಸಿಕೊಂಡಿದ್ದರೂ ಭವಿಷ್ಯದ ಬಗ್ಗೆ ನಾಗರಿಕ ಸಮುದಾಯಕ್ಕೆ ಕೊಟ್ಟ ಕಾಳಜಿ ಎಷ್ಟು ಎಂಬುದನ್ನು ಶಿಕಾಗೋ ನಗರದ ಸಾರ್ವಜನಿಕ ಕೇಂದ್ರ ಗ್ರಂಥಾಲಯದ ಭವ್ಯತೆಯು ಅದ್ಭುತವಾಗಿ ತೆರೆದುಕೊಡುತ್ತದೆ.

ಖ್ಯಾತ ಕವಿ ಟಿ.ಎಸ್. ಎಲಿಯೆಟ್ ಅವರ ಮೇಲಿನ ಮಾತಿನಂತೆ ಗ್ರಂಥಾಲಯದ ಅಸ್ತಿತ್ವವನ್ನು ಕಟ್ಟಿರುವುದಷ್ಟೇ ಅಲ್ಲದೆ ಅದಕ್ಕೆ ಕೊಟ್ಟ ಮಹತ್ವಗಳಿಂದ ಸಾರ್ವಜನಿಕ ಪ್ರೀತಿಯು ವಿಶಿಷ್ಟವಾಗಿ ಅನಾವರಣಗೊಂಡಿದೆ. ಲೈಬ್ರರಿಯ ಒಟ್ಟಾರೆ ನಿರ್ವಹಣೆಯ ಮೂಲಕ ಇಂದಿಗೂ ಅದು ನಡೆಸಿಕೊಂಡು ಬರುತ್ತಿರುವ ಕಾರ್ಯಗಳಿಂದ ಹಾಗೂ ಅದರ ವಿಸ್ತರಣೆಯಿಂದ ಸಾರ್ವಜನಿಕ ಕಾಳಜಿಯು ವ್ಯಕ್ತವಾಗುತ್ತದೆ.

ಶಿಕಾಗೋ ನಗರವು ಭಾರತೀಯರಿಗೆ ಸ್ವಾಮಿ ವಿವೇಕಾನಂದರು 1893ರಲ್ಲಿ ಜಾಗತಿಕ ಧಾರ್ಮಿಕ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿದ ನಗರವೆಂದೇ ಪರಿಚಿತ. ಇದು ಕಲೆ ಮತ್ತು ಸಂಸ್ಕೃತಿಗೆ ಹೆಸರಾದ ನಗರ. ಇಡೀ ನಗರದ ಅನೇಕ ಪ್ರಮುಖ ಕಟ್ಟಡಗಳು ವಾಸ್ತು ವಿನ್ಯಾಸಕ್ಕೆ ಹೆಸರುವಾಸಿ. ಈ ನಗರದ ಸ್ಟೇಟ್ ರಸ್ತೆಯಲ್ಲಿರುವ ನಗರದ ಸಾರ್ವಜನಿಕ ಕೇಂದ್ರ ಗ್ರಂಥಾಲಯದ ಕಟ್ಟಡವೂ ಭವ್ಯವಾದ ಹತ್ತು ಅಂತಸ್ತುಗಳ ಎತ್ತರದ್ದು. ಕಟ್ಟಡದ ವಿನ್ಯಾಸ ಮತ್ತು ಹೊರನೋಟಗಳಿಂದ ಬೃಹತ್ತಾಗಿದ್ದು, ಆಕರ್ಷಕವಾಗಿದೆ. ಕಟ್ಟಡದ ಆರಂಭಿಕ ನಿರ್ಮಾಣಕ್ಕೆ ಕಾರಣರಾದ ಶಿಕಾಗೋ ನಗರದ ಅಂದಿನ ಮೇಯರ್ ಹೆಸರಿನ ಗ್ರಂಥಾಲಯ ಅದು.

'ಹೆರಾಲ್ಡ್ ವಾಷಿಂಗ್ಟನ್ ಲೈಬ್ರರಿ ಕೇಂದ್ರ'ವು ಶಿಕಾಗೋ ನಗರದ 'ಶಿಕಾಗೋ ಸೆವೆನ್' (ಆರ್ಕಿಟೆಕ್ಟ್ಸ್) (ನಮ್ಮಲ್ಲಿ ಸಪ್ತ ಋಷಿಗಳಂತೆ) ಎಂದೇ ಹೆಸರಾದ ಆಧುನಿಕೋತ್ತರ ಕಾಲದ ಮೊದಲ ತಲೆಮಾರಿನ ಏಳು ವಾಸ್ತುಶಿಲ್ಪಿಗಳಲ್ಲಿ ಒಬ್ಬರಾದ ಥಾಮಸ್ ಎಚ್. ಬೀಬೆ ಅವರ ಮುಂದಾಳತ್ವದ ವಾಸ್ತುವಿನ್ಯಾಸದಲ್ಲಿ ನಿರ್ಮಾಣಗೊಂಡ ಕಟ್ಟಡ.

ಈ ಏಳೂ ವಾಸ್ತುಶಿಲ್ಪಿಗಳ ವಿಶೇಷ ಎಂದರೆ 'ಆಧುನಿಕತಾವಾದದ ಸಿದ್ಧಾಂತ'ವನ್ನು (Doctrine of Modernism) ತಮ್ಮ ರಚನೆಗಳಲ್ಲಿ ಮೇಳೈಸುವುದು. ಒಟ್ಟು ಹತ್ತು ಅಂತಸ್ತುಗಳ ಎತ್ತರದ ಹೆರಾಲ್ಡ್ ವಾಷಿಂಗ್ಟನ್ ಗ್ರಂಥಾಲಯ ಕೂಡ ಕೆಂಪು ಇಟ್ಟಿಗೆಗಳ ಹೊರ ಮೇಲ್ಮೈಯಿಂದ ಬಹುದೂರಕ್ಕೂ ಕಾಣುವಂತಿದೆ. ಹತ್ತೊಂಬತ್ತನೆಯ ಶತಮಾನದ ಫ್ರಾನ್ಸಿನ ಪ್ಯಾರಿಸ್ ನಗರದ ಶೈಕ್ಷಣಿಕ ವಾಸ್ತು ವಿನ್ಯಾಸದ (Beaux–Art) ನೋಟದಲ್ಲಿ ಕಾಣುವಂತಹ ಭವ್ಯತೆಯ ಕಟ್ಟಡ. ನೆಲದಿಂದ ಕಟ್ಟಡವು ಎದ್ದ ಭಾಗವು ಗ್ರಾನೈಟ್‌ಗಳಿಂದ ನಿರ್ಮಿತವಾಗಿದ್ದು ಎತ್ತರಕ್ಕೆ ಹೋದಂತೆ ಕೆಂಪಿಟ್ಟಿಗೆಗಳು ಇಡೀ ಕಟ್ಟಡದ ನೋಟವನ್ನು ಆಗಸಕ್ಕೆ ಎತ್ತರಿಸಿದೆ. ಚಾವಣಿಯ ಮೂಲೆಗಳಲ್ಲಿ ಗ್ರೀಕ್ ಜ್ಞಾನ ದೇವತೆಯನ್ನು ಪ್ರತಿನಿಧಿಸುವ ಗೂಬೆ ಪಕ್ಷಿಯಿದ್ದು, ಅದರ ಹಿಂದೆ ಎತ್ತರದ ಚೂಪಾದ ಪ್ರಭಾವಳಿಯ ಹೊತ್ತತಂತಹ ಅಕ್ರೋಟೇರಿಯನ್ (Acroterion) ಎಂಬ ಅಲಂಕಾರಿಕ ವಾಸ್ತು ವಿನ್ಯಾಸದಿಂದ ದೂರದಿಂದಲೇ ಕಣ್ಸೆಳೆಯುವಂತೆ ನಿರ್ಮಿಸಲಾಗಿದೆ.

ಲೈಬ್ರರಿಯ ಕಚೇರಿ ಮುಂತಾದವುಗಳನ್ನು ಒಳಗೊಂಡ ಚಾವಣಿಯ ಹತ್ತನೆಯ ಅಂತಸ್ತಿಗೆ ಮಾತ್ರ ಸಾರ್ವಜನಿಕರಿಗೆ ಪ್ರವೇಶವಿಲ್ಲ. ಉಳಿದ ಒಂಬತ್ತೂ ಅಂತಸ್ತುಗಳು ಸಾರ್ವಜನಿಕರಿಗೆ ಮುಕ್ತ. ಗ್ರಂಥಾಲಯದ ಬಳಕೆಗೆ ಸದಸ್ಯರಾಗುವವರಿಗೆ ಯಾವುದೇ ಶುಲ್ಕವಿಲ್ಲ. ಕಟ್ಟಡದ ಸುತ್ತಲಿನ ನಾಲ್ಕೂ ರಸ್ತೆಗಳ ಎಲ್ಲಾ ಸಾರ್ವಜನಿಕ ದ್ವಾರಗಳಿಂದ ಭವ್ಯವಾದ ಪಡಸಾಲೆ ಅಥವಾ ಪ್ರವೇಶ ಮಂಟಪ (ಲಾಬಿ)ಕ್ಕೆ ಬರಬಹುದು. ಈ ಪಡಸಾಲೆಯು ಎರಡು ಅಂತಸ್ತುಗಳ ಎತ್ತರಕ್ಕೆ ಹರಡಿದೆ. ಇಲ್ಲಿ ಸ್ವಾಗತ ಮತ್ತು ಮಾಹಿತಿ ಕೇಂದ್ರವಿದ್ದು, ಪುಸ್ತಕ ವಿತರಣೆಯ ನಿರ್ವಹಣೆ ಮತ್ತಿತರ ಕಾರ್ಯಗಳಿಗೆ ರೂಪಿತವಾಗಿದೆ.